# ಕಥೆಗೆ ತಕ್ಕಂತೆ ಮೈಂಡ್ ಸೆಟ್ ಮಾಡುವೆ



**ಕಿರಣ್ ಕಾವೇರಪ್ಪ**

**1** ಯಾವ ರೀತಿ ಹಾಡು ಬೇಕು ಎಂದು ನಿರ್ದೇಶಕರು ಮೊದಲು ಒಂದು ನರೇಷನ್ ಕೊಡುತ್ತಾರೆ. ನಂತರ ಕಂಪೋಸರ್ ಜೊತೆ ಕೂರಿಸಿ ಟ್ಯೂನ್ ಕೇಳಿಸುತ್ತಾರೆ. ಕೆಲವೊಮ್ಮೆ ಎಲ್ಲರೂ ಒಟ್ಟಿಗೆ ಕೂತು ಸಂಗೀತ ಕೇಳಿಸುತ್ತಾರೆ. ನಿರ್ದೇಶಕರು ಕೊಟ್ಟ ನರೇಷನ್‌ಗೆ ನನ್ನದೇ ನೋಟ್ಸ್ ಮಾಡಿಕೊಂಡು ವರ್ಕ್ ಮಾಡುತ್ತೇನೆ. ಕಥೆಯ ಹಿನ್ನೆಲೆ ಹಾಡು ಬರೆಯುವೆ. ಐತಿಹಾಸಿಕ ಚಿತ್ರವಾದರೆ, ಆ ಸಿನಿಮಾ ಕಥೆಯ ಇತಿಹಾಸದ ಬಗ್ಗೆ ತಿಳಿದುಕೊಳ್ಳುತ್ತೇನೆ. ಅದಕ್ಕೆ ಸಂಬಂಧಪಟ್ಟ ವಿಷಯದ ಬಗ್ಗೆ ರಿಸರ್ಚ್ ಮಾಡಿಕೊಂಡು ಹಾಡು ಬರೆಯಲು ಸಜ್ಜಾಗುವೆ. ಅದರ ಹೊರತಾಗಿ, ಪ್ರತಿ ಹಾಡು ಬರೆಯುವ ಮುನ್ನ ಸಿನಿಮಾದ ಕಥೆಗೆ ಅನುಗುಣವಾಗಿ (ನಾಯಕನ ಇಂಟ್ರೊಡಕ್ಷನ್, ಲವ್ ಪ್ರಪೋಸ್, ಪ್ರೇಮ ವೈಫಲ್ಯ ಹೀಗೆ...) ಮನಃಸ್ಥಿತಿ ಸೆಟ್ ಮಾಡಿಕೊಳ್ಳುವೆ. ಏಕೆಂದರೆ, ಯಾವ ಎಸೆತದಲ್ಲಿ ಬೌನ್ಸರ್ ಬರುತ್ತೆ, ಯಾವ ಎಸೆತದಲ್ಲಿ ಯಾರ್ಕರ್ ಬರುತ್ತೋ ಗೊತ್ತಿರುವುದಿಲ್ಲ ಅಲ್ವಾ.

**2** ನಾನು ಬರೆದ ಹಾಡು ಟ್ಯೂನ್‌ಗೆ ಸರಿಯಾಗಿ ಹೇಗೆ ಹೊಂದಿಕೊಂಡಿದೆ ಅನ್ನೋದನ್ನ ತಿಳಿಯೋಕೆ ಟೆಕ್ನಿಕಲಿ ಮೀಟ್ರಿಂಗ್ ಅಂತ ಕರಿತೀವಿ. ಹಾಡಿನ ಧಾಟಿಯ ಪ್ರಕಾರ ಸರಾಗವಾಗಿ ಹಾಡಲಾಗದಿದ್ದರೆ ಸಾಹಿತ್ಯ ಟ್ಯೂನ್‌ಗೆ ಹೊಂದುತ್ತಿಲ್ಲ ಎಂದರ್ಥ. ನಾನೂ ಹಿಂದೂಸ್ತಾನಿ ಸಂಗೀತ ಕಲಿತಿದ್ದೇನೆ. ಹಾಗಾಗಿ ಟ್ಯೂನ್‌ಗೆ ತಕ್ಕಂತೆ ಸಾಹಿತ್ಯ ಬರೆಯಲು ಸಹಾಯವಾಗುತ್ತದೆ. ಮೀಟ್ರಿಂಗ್ ಹಾಗೂ ತಾಳಕ್ಕೆ ಅನುಗುಣವಾಗಿ ಬರೆಯಲು ನೆರವಾಗಿದೆ.

**3** ಪ್ರೀತಿ ಬಗ್ಗೆ ಎಷ್ಟೊ ಮಂದಿ ಈಗಾಗಲೇ ಬರೆದಿದ್ದಾರೆ. ತುಂಬಾ ಹಾಡುಗಳೂ ಬಂದಿವೆ. ಸಿನಿಮಾದಲ್ಲಿ ಕಮರ್ಷಿಯಲ್ ಎಲಿಮೆಂಟ್ ಅಂದ್ರೆ ಅದು ಸಾಮಾನ್ಯವಾಗಿ ಪ್ರೀತಿ, ಪ್ರೇಮ ವೈಫಲ್ಯ ಇಂತಹದ್ದೇ ರೀತಿಯದ್ದಾಗಿರುತ್ತದೆ. ಹೀಗಾಗಿ, ಇರುವ ಅವಕಾಶದಲ್ಲೇ ಹೊಸದಾಗಿ ಬರೆಯಬೇಕಾದ ಅನಿವಾರ್ಯತೆ ಇದೆ. ನಾನು ಬರೆವ ಹಾಡು ತಲುಪಬೇಕಾದದ್ದು ಕೇಳುಗರಿಗೆ. ಸೋ, ಕೈ ಮುಂದೆ ಅವರು ನಿಘಂಟು ಇಟ್ಟುಕೊಂಡು ಹಾಡು ಕೇಳಲ್ಲ. ಅವರಿಗೆ ತಲುಪುವಂತೆ